**ಎಸ್.ಸಿ. ನಂ. 10/2019**

**ದೋ.ಸಾ. : 18 ಪ್ರಾ.ಸಾ. :51**

ಸಾಕ್ಷಿಯ ಹೆಸರು : ನಾಗೇಶ ಹನುಮಂತಪ್ಪ ಗುದಗಿ

**ದಿನಾಂಕಃ 14-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ-</u>**

2. ಪೊಲೀಸರು ನನ್ನನ್ನು ಪಂಚನಾಮೆಗೆ ಕರೆದಾಗ ಸಂಜೆ 7.00 ಗಂಟೆಯಾಗಿದ್ದು, ಆದಿನ ನಾನು ಮಾರ್ಕೆಟ್ ನಲ್ಲಿ ಇದ್ದೆನು, ಆದರೆ ಅವರು ನನಗೆ ನೋಟೀಸ್ ನೀಡಿರಲಿಲ್ಲ. ನನ್ನನ್ನು ಕರೆದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಮಾರ್ಕೆಟ್ ನಿಂದ ಪೊಲೀಸ್ ಠಾಣೆಗೆ ಹೋಗಲು 10 ನಿಮಿಷವಾಯಿತು. ಪೊಲೀಸ್ ಠಾಣೆಗೆ ಹೋದ ನಂತರ ಪೊಲೀಸರು ಯಾವುದೇ ನೋಟಿಸ್ ನೀಡಿರುವುದಿಲ್ಲ. ಪಂಚನಾಮೆಯ ಸಮಯದಲ್ಲಿ ಬಂಗಾರದ ಚೈನನ್ನು ಪೊಲೀಸರಿಗೆ ಯಾರು ನೀಡಿದರು ಎಂದು ನನಗೆ ಗೊತ್ತಿಲ್ಲ ಹಾಗೂ ಅದು ಯಾರಿಗೆ ಸೇರಿದ್ದು ಎಂದೂ ಸಹ ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಇದೇ ರೀತಿ ಬರೆಯಬೇಕು ಎಂದು ನಾನು ಪೊಲೀಸರಿಗೆ ಯಾವುದೇ ಮಾಹಿತಿ ನೀಡಿಲ್ಲ. ಸದರಿ ಬಂಗಾರದ ಚೈನ್ 12 ಗ್ರಾಂ. ತೂಕ ಇತ್ತು. ತೂಕ ಮಾಡಿದ ಅಕ್ಕಸಾಲಿಗರ ಹೆಸರು ನನಗೆ ಹೇಳಲು ಬರುವುದಿಲ್ಲ. ನಾನು ಠಾಣೆಗೆ ಹೋದ ನಂತರ ಪೊಲೀಸರು ಈಗಾಗಲೇ ತಯಾರಿಸಿಟ್ಟ ದಾಖಲೆಗೆ ನನ್ನ ಸಹಿ ಪಡೆದರು ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ, ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ.